ತಾಳೆ ಎಣ್ಣೆಯನ್ನು ವಿತರಿಸುವ ಬಗ್ಗೆ.

೧೪೭೭ ಶ್ರೀ ಪೆರಿಕಾಲ್. ಎಂ. ಮಲ್ಲಪ್ಪ. (ಚಿಕ್ಕಪೇಟೆ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ಬೆಂಗಳೂರಿಂ ಅನುಪಚಾರಿಕ ಪಡಿತರ ಪ್ರದೇಶಗಳಲ್ಲಿ ಪಡಿತರ ಚೀಟಿದಾರರಿಗೆ ಮಾಹೆಯಾನ ಎಷ್ಟು ತಾಳೆ ಎಣ್ಣೆಯನ್ನು ವಿತರಿಸಲಾಗುತ್ತಿದೆ ?

ಆ) ತಾಳೆ ಎಣ್ಣೆಯ ಪ್ರಮಾಣವನ್ನು ಹೆಚ್ಚಿಸುವ ಬಗ್ಗೆ ಏನಾದರೂ ಪ್ರಸ್ತಾವನೆ ಇದೆಯೇ ?

ಇ) ಹಾಗಿಲ್ಲದಿದ್ದರೆ ಸರ್ಕಾರ ಬೆಂಗಳೂರು ಅನೌಪಚಾರಿಕ ಪಡಿತರ ಚೀಟಿದಾರರಿಗೆ ವಿತರಣಾ ಪ್ರಮಾಣವನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಅಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು),—

ಅ) ಭಾರತ ಸರಕಾರವು ನೀಡುವ ಹಂಚಿಕೆಯನ್ನು ಆಧರಿಸಿ ಪ್ರತಿ ತಿಂಗಳಿಗೆ ಪ್ರತಿ ಕಾರ್ಡು ದಾರರಿಗೆ ೧ ಕೇಲೋ ದಿಂದ ೨ ಕಲೋವರೆಗೆ ಪಾಮೋಲಿನ ಎಣ್ಣೆಯನ್ನು ವಿತರಿಸಲಾಗುತ್ತಿದೆ.

ಆ) ಭಾರತ ಸರ್ಕಾರದ ನೀಡುವ ಹಂಚಿಕೆಯನ್ನು ಅವಲಂಬಿಸಿದೆ.

ಇ) ಈ ರಾಜ್ಯಕ್ಕೆ ನೀಡುತ್ತಿರುವ ಪಾಮೋಲಿನ ಎಣ್ಣೆಯ ಪ್ರಮಾಣವನ್ನು ಹೆಚ್ಚಿಸಲು ಭಾರತ ಸರ್ಕಾರವನ್ನು ಮೇಲಿಂದ ಮೇಲೆ ಕೋರಲಾಗುತ್ತಿದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಮಾನ್ಯ ಸಭಾಧ್ಯಕ್ಷರೇ, ಪಾಮ್ ಆಯಿಲ್‌ನ್ನು ಪ್ರತಿಯೊಂದು ರೇಷನ್ ಅಂಗಡಿಗೂ ಸರಕಾರದವರು ಸರಬರಾಜು ಮಾಡುತ್ತಿದ್ದಾರೆ: ಒಂದು ರೇಷನ್ ಅಂಗಡಿಯಲ್ಲಿ ೫೦೦–೬೦೦ ರೇಷನ್ ಕಾರ್ಡ್ಸ್ ಇರುತ್ತದೆ. ರೇಷನ್ ಅಂಗಡಿಗಳಲ್ಲಿ ೫೦–೬೦ ಪರ್ಸೆಂಟ್ ಪಾಮ್ ಆಯಿಲ್ ಖರ್ಚಾಗುವುದಿಲ್ಲ. ಈ ರೀತಿ ಉಳಿದ ಪಾಮ್ ಆಯಿಲ್‌ನ್ನು ರೇಷನ್ ಶಾಪ್‌ನವರು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿಕೊಳ್ಳುತ್ತಾರೆ, ಇದು ಒಂದು ಲೀಟರ್‌ಗೆ ೧೨ ರೂಪಾಯಿ ೫೦ ಪೈಸೆ ಇದ್ದು, ಒಂದು ಅಂಗಡಿಯಲ್ಲಿ ೫೦೦–೬೦೦ ಲೀಟರ್‌ನ್ನು ಜನರು ತೆಗೆದುಕೊಳ್ಳುವುದಿಲ್ಲ, ಬಡವರ ಹತ್ತಿರ ಕೂಡುಕೊಳ್ಳುವುದಕ್ಕೆ ದುಡ್ಡಿರುವುದಿಲ್ಲ, ಸಾಹುಕಾರರು ಇದನ್ನು ಯೂಸ್ ಮಾಡುವುದಿಲ್ಲ. ಒಂದೊಂದು ರೇಷನ್ ಅಂಗಡಿಯಲ್ಲಿ ೫೦೦–೬೦೦ ಲೀಟರ್ ಉಳಿದರೆ, ಕರ್ನಾಟಕದಲ್ಲಿ ಸಾವಿರಾರು ರೇಷನ್ ಶಾಪ್ಸ್ ಕರ್ನಾಟಕದಲ್ಲಿ ಇವೆ, ಇವರಿಗೆ ಕೋಟಾವನ್ನೂ ಕಡಿಮೆ ಮಾಡುತ್ತಿಲ್ಲ, ಆದುದರಿಂದ ಇವರು ಪಾಮ್ ಆಯಿಲ್‌ನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸನ್ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ? ಇದನ್ನೇನಾದರೂ ಕಂಟ್ರೋಲ್ ಮಾಡುವುದಕ್ಕೆ ನಿಮ್ಮ ಇನ್‌ಸ್ಪೆಕ್ಟರ್‌ಗಳಿಗೆ ಹೇಳುತ್ತೀರಾ ? ಕೋಟಾವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

SRI AZIZ SAIT.—Sir, this is a known fact that palm oil is being supplied by Government of India. As you can see that in the month of April, 90,3000 Metric Tonnes were received out of which for Bangalore we have allotted 659 metric tonnes. In May 90,750 metric tonnes we received more. We were forced to reduce the quota by 95 metric tonnes in the month of May. In June 4,500 metric tonnes we got. For Bangalore and sub-urbs we earmarked 1150 metric tonnes and we supplied 1 to 2 Kg. per month percard depending on the allotment made by Government of India. As I earlier told in this House, there are different type of people who don't lift this quota, Naturally that remains with the fair-price shops and they will sell it in the black market We are looking into all these aspects and how to plug this. We have been punishing them. we have been cancelling their licences and we are fining them. All is going on, but yet black market is going on in different way. I assure the House that something will be done after the conclusion of the session.